# ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ ವೆಂಕಟೇಶ್ ರವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

**ಪ್ರಶ್ನೆ**:-ಯುನೋಕಾಯಿನ್ ಟೆಕ್ನಾಲಜೀಸ್ ಕಂಪನಿ ಸರ್ವರ್ ಹ್ಯಾಕ್ ಮಾಡಿ ಕೋಟ್ಯಾಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್ ಕಳ್ಳತನ ಮಾಡಿದ ಸಂಘಟಿತ ಕೃತ್ಯದಲ್ಲಿನ ಆಪಾದಿತರು ಮತ್ತು ಹಗರಣದ ಬಗ್ಗೆ ಪ್ರಗತಿಯಲ್ಲಿರುವ ಸಿ.ಐ.ಡಿ ವಿಚಾರಣೆ ಮತ್ತು ವರದಿ ಕುರಿತು.

*******

**ಉತ್ತರ**:-ಫಿರ್ಯಾದುದಾರರಾದ ಶ್ರೀ ಹರೀಶ್ ಬಿ.ವಿ. ತಂದೆ ಬಿ.ಎನ್. ಗುರುಪ್ರಸಾದ್, ನಿರ್ದೇಶಕರು, ಯೂನೋಕಾಯಿನ್ ಟೆಕ್ನಾಲಜೀಸ್ ಪ್ರೈ. ಲಿ., ಎಸ್.ಎಸ್. ಪುರಂ, ತುಮಕೂರು ನಗರ, ಇವರು ದಿನಾಂಕ:17.07.2017 ರಂದು ತುಮಕೂರಿನ ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನಲ್ಲಿ ದಿನಾಂಕ:23.06.2017 ರಂದು ಮಧ್ಯಾಹ್ನ 02-30 ಗಂಟೆಯ ಸಮಯದಲ್ಲಿ ಯಾರೋ ಅಪರಿಚಿತರು ತುಮಕೂರಿನ ಎಸ್.ಎಸ್. ಪುರಂನಲ್ಲಿರುವ ದೂರುದಾರರಿಗೆ ಸೇರಿದ ಯೂನೋಕಾಯಿನ್ ಟೆಕ್ನಾಲಜೀಸ್ ಪ್ರೈ. ಲಿ., ಎಂಬ ಬಿಟ್‌ಕಾಯಿನ್ ಎಕ್ಸ್ಚೇಂಜ್ ಕಂಪನಿಯ ಸರ್ವರ್‌ನ ಡಾಟಾ ಬೇಸ್‌ನ್ನು ಹ್ಯಾಕ್ ಮಾಡಿ, ಅದರಲ್ಲಿದ್ದ ವಿವಿಧ ಗ್ರಾಹಕರಿಗೆ ಸಂಬಂಧಿಸಿದ ಸುಮಾರು ರೂ. 1,14,00,000/-ಗಳ ಮೌಲ್ಯದ 60.6 ಬಿಟ್ ಕಾಯಿನ್‌ಗಳನ್ನು ಕಾನೂನು ಬಾಹಿರವಾಗಿ ಮತ್ತು ಮೋಸದಿಂದ ತಮ್ಮ ವ್ಯಾಲೇಟ್‌ಗಳಿಗೆ ವರ್ಗಾವಣೆ ಮಾಡಿಕೊಂಡಿದ್ದು, ಅವುಗಳಲ್ಲಿ 1 ಬಿಟ್‌ಕಾಯಿನನ್ನು 1KsEjQc6VtjoghZ2XUBhiAtbtxzewRrTwx ವ್ಯಾಲೇಟ್ ಅಡ್ರೆಸ್‌ಗೆ ಮತ್ತು 59.6 ಬಿಟ್‌ಕಾಯಿನನ್ನು 1CUigQz9TSQeJQ6agHgyUL TdTTtquDrngD ವ್ಯಾಲೇಟ್ ಅಡ್ರೆಸ್‌ಗೆ ವರ್ಗಾಯಿಸಿಕೊಂಡಿರುತ್ತಾರೆಂದೂ, ಅಲ್ಲದೆ, ಫಿರ್ಯಾದುದಾರರ ಕಂಪನಿಯ ಗ್ರಾಹಕರ ಡಾಟಾವನ್ನು ಕಳವು ಮಾಡಿಕೊಂಡಿದ್ದು, ಈ ರೀತಿ ಮೋಸ, ವಂಚನೆ ಎಸಗಿದ ಆಪಾದಿತರ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿದ ದೂರಿನ ಮೇರೆಗೆ, ತುಮಕೂರು ಹೊಸ ಬಡಾವಣೆ ಪೊಲೀಸ್ ಠಾಣಾ ಮೊ. ಸಂ. 85/2017, ಕಲಂ 420 ಐಪಿಸಿ ಮತ್ತು ಕಲಂ 66, 67, 68 ಐಟಿ ಕಾಯ್ದೆ-2000 ರ ರೀತ್ಯಾ ಪ್ರಕರಣ ದಾಖಲು ಮಾಡಿಕೊಂಡು ನಂತರ ಸದರಿ ಪ್ರಕರಣವನ್ನು ಹೆಚ್ಚಿನ ತನಿಖೆಗೆ ತುಮಕೂರಿನ ಸಿ.ಇ.ಎನ್. ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿರುತ್ತದೆ.

ಪ್ರಕರಣದ ತನಿಖೆಯನ್ನು ಸಿ.ಇ.ಎನ್ ಪೊಲೀಸ್ ಠಾಣೆಯಿಂದ ಕೈಗೊಳ್ಳಲಾಗಿರುತ್ತದೆ. ಆದರೆ, ಪ್ರಕರಣವು ಪತ್ತೆಯಾಗದ ಕಾರಣ ದಿನಾಂಕ:13.09.2019 ರಂದು 'ಸಿ' ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ವರದಿಯನ್ನು ನ್ಯಾಯಾಲಯವು ದಿನಾಂಕ: 25.10.2019 ರಂದು ಅಂಗೀಕರಿಸಿರುತ್ತದೆ.

ಇದರ ಬಳಿಕ 2020ರಲ್ಲಿ ಕ್ರಿಪ್ಟೋಕರೆನ್ಸಿ ಹ್ಯಾಕಿಂಗ್‌ಗೆ ಸಂಬಂಧಿಸಿದಂತೆ ಬೆಂಗಳೂರು ನಗರದ ಕಾಟನ್‌ಪೇಟೆ ಪೊಲೀಸ್ ಠಾಣೆಯ ಮೊ. ಸಂ.153/2020, ಕೆ.ಜಿ ನಗರ ಪೊಲೀಸ್ ಠಾಣೆ ಮೊ. ಸಂ. 91/2020, ಬೆಂಗಳೂರು ನಗರ ಸೈಬರ್‌ಕ್ರೈಂ ಪೊಲೀಸ್ ಠಾಣೆ ಮೊ.ಸಂ 45/2020 ಪ್ರಕರಣಗಳು ದಾಖಲಾದ ನಂತರ ಈ ಮಾಹಿತಿಯ ಮೇರೆಗೆ ತುಮಕೂರು ಸಿ.ಇ.ಎನ್ ಪೊಲೀಸ್ ಠಾಣೆಯ ಠಾಣಾಧಿಕಾರಿಯವರು ದಿನಾಂಕ: 22.01.2021 ರಂದು ಘನ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ ಪ್ರಕರಣವನ್ನು ಮರು ತನಿಖೆ ಮಾಡಲು ಕೋರಲಾಗಿರುವುನ್ನು ಪರಿಗಣಿಸಿದ ಘನ ನ್ಯಾಯಾಲಯವು ದಿನಾಂಕ: 28.01.2021 ರಂದು ಈ ಪ್ರಕರಣದ ತನಿಖೆ ಮುಂದುವರೆಸಲು ಆದೇಶ ನೀಡಿರುತ್ತದೆ. ಅದರಂತೆ ತುಮಕೂರು ಸಿ.ಇ.ಎನ್. ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಬೆಂಗಳೂರು ನಗರ ಸೈಬರ್ ಕ್ರೈಂ ಪೊಲೀಸ್ ಠಾಣೆಯ ಮೊ.ಸಂ 45/2020 ಪ್ರಕರಣದಲ್ಲಿನ ದಾಖಲಾತಿಗಳನ್ನು ಪಡೆದುಕೊಂಡು ಪರಿಶೀಲನೆ ಮಾಡಿ ಕೈಗೊಂಡಿರುತ್ತಾರೆ.

ಈ ಪ್ರಕರಣದ ತನಿಖೆಯಲ್ಲಿ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಜಾಲಗಳಲ್ಲಿ ಭಾಗಿಯಾಗಿರುವ ಸಾಧ್ಯತೆಗಳಿದ್ದು ಕೃತ್ಯದ ಆರೋಪಿಗಳು ಸೈಬರ್ ವಿಷಯಗಳಲ್ಲಿ ಪರಿಣಿತರಾಗಿರುತ್ತಾರೆ. ಬಿಟ್ ಕಾಯಿನ್‌ಗಳು ಮತ್ತು ಡಾರ್ಕ್ ನೆಟ್‌ಗಳಲ್ಲಿ ವ್ಯವಹಾರ ಮಾಡಿರುವ ಮಾಹಿತಿಗಳಿರುವುದರಿಂದ, ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಲು ಇನ್ನೂ ವಿಸ್ತೃತ ತನಿಖೆಯನ್ನು ಕೈಗೊಳ್ಳಲು ಹೆಚ್ಚಿನ ತಾಂತ್ರಿಕ ಪರಿಣಿತಿ ಇರುವ ವಿಶೇಷ ತನಿಖಾ ತಂಡದ ಅವಶ್ಯಕತೆ ಇರುವುದರಿಂದ, ಇತರೆ ಹ್ಯಾಕಿಂಗ್ ಪ್ರಕರಣಗಳ ಜೊತೆಯಲ್ಲಿ ಈ ಪ್ರಕರಣದ ಮುಂದಿನ ತನಿಖೆಯನ್ನು ನಡೆಸಲು ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 48 ಸಿಓಡಿ 2023, ದಿನಾಂಕ: 14.07.2023ರಂದು ಸಿಐಡಿಯ ಎಸ್.ಐ.ಟಿಗೆ ವರ್ಗಾಯಿಸಲಾಗಿರುತ್ತದೆ.

ಸಿಐಡಿಯ ತನಿಖೆ ಸಮಯದಲ್ಲಿ ಯೂನೋಕಾಯಿನ್ ಟೆಕ್ನಲಾಜಿಸ್ ಪ್ರೈ. ಲಿ., ಕಂಪನಿಯ ಸರ್ವರ್‌ನ ಹ್ಯಾಕ್ ನಡೆದ ಬಗ್ಗೆ ಖಾಸಗಿ ಸಂಸ್ಥೆಯಿಂದ ಫಾರೆನ್ಸಿಕ್ ಆಡಿಟ್ ಮಾಡಿಸಿ ಪಡೆದ ವರದಿಯಲ್ಲಿ ಆರೋಪಿಯಾದ ಶ್ರೀಕೃಷ್ಣ ರಮೇಶ್ @ ಶ್ರೀಕಿ ಯು ಹಲವಾರು ಫೈಲ್‌ಗಳನ್ನು ಬಳಸಿ ಹ್ಯಾಕ್ ಮಾಡಿರುವುದು ಮತ್ತು ಪತ್ತೆ ಹಚ್ಚಲಾದ ಮಹತ್ವವಾದ Incriminating Evidence ನಲ್ಲಿ ಯೂನೋಕಾಯಿನ್ ಟೆಕ್ನಾಲಜೀಸ್ ಪ್ರೈ.ಲಿ., ಕಂಪನಿಯ ಕಂಪ್ಯೂಟರ್ ಸರ್ವರ್‌ನಿಂದ ಅಕ್ರಮವಾಗಿ ಬಿಟ್‌ಕಾಯಿನ್‌ಗಳನ್ನು ವರ್ಗಾಯಿಸಿಕೊಂಡ ವ್ಯಾಲೆಟ್ ಅಡ್ರೆಸ್‌ಗಳು ವಶಪಡಿಸಿಕೊಳ್ಳಲಾದ ಲ್ಯಾಪ್‌ಟಾಪ್‌ನಿಂದ ಕಂಡು ಬಂದಿದ್ದು, ಈ ಮೂಲಕ ಶ್ರೀ ಕೃಷ್ಣ @ ಶ್ರೀಕಿ ಈತನು ಅಪರಾಧವೆಸಗಿರುವುದು ದೃಢಪಟ್ಟಿರುತ್ತದೆ.

ಆರೋಪಿಯ ಕ್ರಿಪ್ಟೋಕರೆನ್ಸಿ ವ್ಯಾಲೆಟ್‌ನಲ್ಲಿ ಕಳುವಾದ ಕ್ರಿಪ್ಟೋಕರೆನ್ಸಿಗಳ ಪೈಕಿ ಉಳಿದಿದ್ದ 9.91484 mBTC (0.00991484 BTC) ಗಳನ್ನು ವಶಕ್ಕೆ ಪಡೆಯಲಾಗಿದ್ದು, ಆರೋಪಿತನು ಕಳವು ಮಾಡಿದ ಬಿಟಿಸಿಗಳು ಪತ್ತೆ ಹಚ್ಚಬಾರದು ಎಂಬ ಉದ್ದೇಶದಿಂದ

ಕ್ರಿಪ್ಟೋಕರೆನ್ಸಿ ಮಿಕ್ಸರ್ ಸರ್ವೀಸ್ ಬಳಸಿ ಕಳವು ಮಾಡಿರುವ ಬಿಟಿಸಿಗಳನ್ನು ಮರೆಮಾಚಿರುವುದು ಆತನ ಲ್ಯಾಪ್‌ಟಾಪ್‌ನಲ್ಲಿದ್ದ ಫೈಲ್‌ಗಳಿಂದ ದೃಢಪಟ್ಟಿರುತ್ತದೆ.

ಈ ಪ್ರಕರಣದಲ್ಲಿ ಇಬ್ಬರು ಪ್ರಮುಖ ಆರೋಪಿಗಳಾದ ಆರೋಪಿ-1 ಶ್ರೀಕೃಷ್ಣ @ ಶ್ರೀಕಿ ಈತನನ್ನು ಬೆಂಗಳೂರಿನ ಆರ್.ಟಿ. ನಗರದ ಫೋರ್‌ಸೀಸನ್ಸ್ ಹೋಟೆಲ್‌ನಲ್ಲಿ ದಿನಾಂಕ: 07.05.2024 ರಂದು ದಸ್ತಗಿರಿ ಮಾಡಲಾಗಿರುತ್ತದೆ. ಆರೋಪಿ-2 ರಾಬಿನ್ ಖಂಡೇಲ್‌ವಾಲ್ ಈತನನ್ನು ರಾಜಸ್ಥಾನದ ಕೋಟಾ ದಿಂದ ದಿನಾಂಕ:23.05.2024 ರಂದು ದಸ್ತಗಿರಿ ಮಾಡಿ ತನಿಖೆ ಕೈಗೊಳ್ಳಲಾಗಿದ್ದು, ಸದರಿ ಆರೋಪಿತರುಗಳನ್ನು ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿರಿಸಲಾಗಿರುತ್ತದೆ. ಈ ಆರೋಪಿತರುಗಳ ಮೇಲೆ ದಿನಾಂಕ: 20.05.2024 ರಂದು ಡಿಐಜಿ, ಸಿಐಡಿ ರವರು ನೀಡಿದ ಅನುಮತಿಯ ಮೇರೆಗೆ KCOCA, 2000 (Karnataka Control of Organized Crime Act, 2000) ರ ಕಲಂ 3 ರನ್ವಯ ತನಿಖೆಯನ್ನು ಕೈಗೊಳ್ಳಲಾಗಿತ್ತು. ಆದರೆ ಎ-1 ಮತ್ತು ಎ-2 ಆರೋಪಿತರುಗಳು ಅವರುಗಳ ವಿರುದ್ಧ KCOCA, 2000ರ ಕಲಂ 3ರಡಿ ತನಿಖೆ ನಡೆಸಲು ಅನುಮತಿ ನೀಡಿದ ದಿನಾಂಕ:20.05.2024ರ ಆದೇಶವನ್ನು ಪ್ರಶ್ನಿಸಿ ಘನ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 15943/2024 C/W 15622/2024ಗಳಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:03.07.2024ರ ತೀರ್ಪಿನಲ್ಲಿ ಕೋಕಾ ಕಾಯ್ದೆಯಡಿಯ ತನಿಖೆ ನಡೆಸಲು ಅನುಮತಿ ನೀಡಿದ ದಿನಾಂಕ:20.05.2024ರ ಆದೇಶವನ್ನು ರದ್ದುಗೊಳಿಸಿ ಆದೇಶಿಸಿರುತ್ತದೆ. ಉಳಿದಂತೆ ಸಿಐಡಿಯಲ್ಲಿ ಸದರಿ ಪ್ರಕರಣದ ತನಿಖೆಯು ಪ್ರಗತಿಯಲ್ಲಿರುತ್ತದೆ.

**ಸಂಖ್ಯೆ:ಹೆಚ್‌ಡಿ 26 ಎಸ್‌ಡಿಎನ್ 2024**

**(ಡಾ: ಜಿ.ಪರಮೇಶ್ವರ)**
**ಗೃಹ ಸಚಿವರು**